ಶ್ರೀ ಧರ್ಮಸಿಂಗ್ (ಕಂದಾಯ ಮಂತ್ರಿಗಳು) :

ಅ) ಮತ್ತು ಆ) ದಿನಾಂಕ 1-2-63ರಂದು ಮಾಜಿ ಶ್ಯಾನುಭೋಗರುಗಳು ಸೇವೆಯಲ್ಲಿದ್ದು ಅನಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 16 (2)ರಡಿಯಲ್ಲಿ ಪರಿಗಣಿತ ಗ್ರಾಮಲೆಕ್ಕಿಗರಾಗಿ ಮುಂದುವರೆದು ಖಾಯಂ ಗ್ರಾಮಲೆಕ್ಕಿಗರಿಗೆ ಪ್ರಭಾರ ವಹಿಸಿಕೊಟ್ಟಿರುವ ಮಾಜಿ ಶ್ಯಾನುಭೋಗರಿಗೆ ಮಾಸಿಕ ರೂ. 500.00 ಗಳ ಅಡ್ಹಾಕ್ ಪಿಂಚಣಿ ನೀಡಲಾಗುತ್ತಿದೆ. (ಈ) ಉಪ ಪ್ರಶ್ನೆಗೆ ನೀಡಿರುವ ಉತ್ತರದಿಂದ ತಾರತಮ್ಯದ ಪ್ರಶ್ನೆ ಇಲ್ಲ.

(ಇ) ಈ ಬಗ್ಗೆ ಸರ್ಕಾರವು ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಲಾಗಿತ್ತು.

(ಈ) ಈಗ ಸರ್ಕಾರವು ಶ್ಯಾನುಭೋಗರಿಗೆ ಕೊಡುತ್ತಿರುವಂತೆ ಪಟೇಲರಿಗೂ ಸಹ ಮಾಸಿಕ ಅಡ್ಹಾಕ್ ವಿಶ್ರಾಂತಿ ವೇತನ ರೂ. 500.00 ನೀಡಲು ತೀರ್ಮಾನಿಸಿದೆ.

**ರೈತರು ಸಹಕಾರ ಸಂಘಗಳಿಗೆ ಜಮೀನು ಆಧಾರ ಮಾಡುವಾಗ ರಿಜಿಸ್ಟ್ರೇಷನ್ ಶುಲ್ಕದಲ್ಲಿ ಹೆಚ್ಚಳ**

644 - ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರೈತರು ವಿವಿಧ ಉದ್ದೇಶಗಳಿಗಾಗಿ ಸಹಕಾರ ಸಂಘಗಳಿಂದ ಸಾಲ ಪಡೆಯುವಾಗ ಸಹಕಾರ ಸಂಘಗಳಿಗೆ ತಮ್ಮ ಜಮೀನು ಆಧಾರ ಮಾಡುವಾಗಿನ ರಿಜಿಸ್ಟ್ರೇಷನ್ ಶುಲ್ಕವನ್ನು ಶೇ. 5 ನಿಗಧಿಪಡಿಸಿರುವುದು ಸರಿಯೇ?*

ಆ) *ಹಾಗಿದ್ದಲ್ಲಿ, ಅದು ರೈತರಿಗೆ ಹೆಚ್ಚು ಹೊರೆಯಲ್ಲವೇ?*

ಇ) *ಹಾಗಿದ್ದಲ್ಲಿ, ಅದನ್ನು ಸರ್ಕಾರ ಶೇಕಡಾ-5 ರಿಂದ ಶೇಕಡಾ - 3 ಅಥವಾ 2 ರಂತೆ ಕಡಿಮೆ ಮಾಡುವುದೇ?*

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು) :

ಅ) ಶೇಕಡಾ-2 ರಂತೆ ಮಾತ್ರ ವಿಧಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

**ರೇಷ್ಮೆ ಕಾರ್ಖಾನೆಗಳ ಪುನರ್ ನವೀಕರಣ**

695 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ರೇಷ್ಮೆ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದ ಪರಿಮಿತಿಯಲ್ಲಿ ಇರುವ ರೇಷ್ಮೆ ಫಿಲಿಯೇಚರ್ಗಳು ಯಾವುವು?*

ಆ) *ಅವುಗಳನ್ನು ಯಾವಾಗ ಪ್ರಾರಂಭಿಸಲಾಯಿತು ಮತ್ತು ಪ್ರಾರಂಭದಲ್ಲಿದ್ದ ಬೇಸಿನ್ಗಳು ಎಷ್ಟು?*

ಇ) *ಅವುಗಳಲ್ಲಿ ಈಗ ಇರುವವು ಎಷ್ಟು ಹಾಗೂ ಇಲ್ಲಿಯವರೆಗೆ ಆಗಿರುವ ನಷ್ಟ ಎಷ್ಟು?*

ಈ) *ಸರ್ಕಾರದ ಪರಿಮಿತಿಯಲ್ಲಿದ್ದ ರೇಷ್ಮೆ ಕೈಗಾರಿಕೆಗಳನ್ನು ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದ ಮುಖಾಂತರ ಆಧುನೀಕರಣಕ್ಕಾಗಿ ಹೂಡಿದ ಬಂಡವಾಳ ಮತ್ತು ಸಧ್ಯದ ಪರಿಸ್ಥಿತಿಯಲ್ಲಿ ಅನುಭವಿಸುತ್ತಿರುವ ನಷ್ಟವೆಷ್ಟು?*

ಉ) *ಆಧುನೀಕರಿಸಿದ ಮೇಲೂ ಆ ಕಾರ್ಖಾನೆಗಳು ನಷ್ಟು ಅನುಭವಿಸುತ್ತಿದ್ದು ಆ ಬಗ್ಗೆ ಸರ್ಕಾರದ ಮುಂದಿನ ಯೋಜನೆಗಳೇನು?*